ಗುಣಮಟ್ಟದ ರಸ್ತೆ ನಿರ್ಮಿಸಲು ಒತ್ತಾಯ

ಅಧಿಕಾರಿಗಳ ನಿರ್ಲಕ್ಷ್ಯ: ಮೌನ ವಹಿಸಿದ ಜನಪ್ರತಿನಿಧಿಗಳು | ರಸ್ತೆ ಕಾಮಗಾರಿಗೆ ಒತ್ತಾಯ

ಬೀದರ್: ಔರಾದ ತಾಲೂಕಿನ ಚಿಂತಾಕಿ ನಾಗನಪಲ್ಲಿ ಬಾರ್ಡರ್ ರಸ್ತೆಯು ಸಂಪೂರ್ಣ ಡಾಂಬರ್ ಕಿತ್ತು ಹೋಗಿದೆ. ಈ ರಸ್ತೆಯ ಮೇಲೆ ಸಂಚರಿಸುವ ವಾಹನ ಸವಾರರು ನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ.

ಆದರೆ ರಸ್ತೆ ನಿರ್ಮಿಸಲು ಜನಪ್ರತಿನಿಧಿಗಳು ಮಾತ್ರ ಮೌನವಹಿಸಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ. ಔರಾದ ಚಿಂತಾಕಿ. ಹಾಗೂ ವಡಗಾಂವ ಚಿಂತಾಕಿ ಮಾರ್ಗದಿಂದ ನೆರೆ ರಾಜ್ಯ ತೆಲಂಗಾಣ ಸಂಪರ್ಕಿಸುವ ಮುಖ್ಯ ರಸ್ತೆಯಾಗಿದೆ. ಸಂಪೂರ್ಣ ಹಾಳಾಗಿದೆ.

ಎರಡು ವರ್ಷಗಳಿಂದ ಈ ರಸ್ತೆಯಲ್ಲಿ ಸಂಚರಿಸಲು ಸಮಸ್ಯೆಯಾಗಿದೆ ಆದರೆ ಅಧಿಕಾರಿಗಳು ಮಾತ್ರ ಮೌನ ವಹಿಸಿದ್ದಾರೆ.

ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಹೇಳುವ ಜನಪ್ರತಿನಿಧಿಗಳು ಕೂಡ ಕಾರ್ಯಕ್ರಮಕ್ಕೆ ಮಾತ್ರ ಸೀಮಿತರಾಗಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ. ಸಂಪೂರ್ಣ ಡಾಂಬರ್ ಕಿತ್ತು ಹೋಗಿದೆ.

ಕಚ್ಚಾ ರಸ್ತೆಯಾಗಿ ಸಂಚರಿಸಲು ಈ ಧೂಳಿನ ರಸ್ತೆಯ ಮಧ್ಯ ಸಂಚರಿಸಲು ಹರಸಾಹಸ ಪಡುವಂತಾಗಿದೆ ಎಂದು ನಾಗನಪಲ್ಲಿ ಗ್ರಾಮಸ್ಥರು ದೂರಿದ್ದಾರೆ.

> ಡಾಂಬರ್ ಕಿತ್ತು ಹೋಗಿ ಎರಡು ವರ್ಷ ಕಳೆದರೂ ಕೂಡ ಗುಣಮಟ್ಟದ ರಸ್ತೆ ನಿರ್ಮಿಸಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮೌನ ವಹಿಸುತ್ತಿದ್ದಾರೆ. ಶೀಘ್ರದಲ್ಲೇ ಗುಣಮಟ್ಟದ ರಸ್ತೆ ನಿರ್ಮಿಸಲು ಅಧಿಕಾರಿಗಳು ಗಮನ ಹರಿಸಬೇಕು
>
> -ಸತೀಷ ವಗ್ಗೆ, ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ

ಹೋರಾಟದ ಎಚ್ಚರಿಕೆ

ಶೀಘ್ರದಲ್ಲೇ ಗುಣಮಟ್ಟದ ರಸ್ತೆಯು ನಿರ್ಮಿಸದೆ ಇದ್ದಲ್ಲಿ ಲೋಕೋಪಯೋಗಿ ಇಲಾಖೆಯ ಕಚೇರಿಯ ಮುಂದೆ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ವಿವಿಧ ಸಂಘಟನೆಯ ಪದಾಧಿಕಾರಿಗಳು ಹೋರಾಟ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಸಾಕಷ್ಟು ಸಲ ಮಾಧ್ಯಮದ ಮುಖಾಂತರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರು ಕೂಡ ಅಧಿಕಾರಿಗಳು ಮಾತ್ರ ಮೌನವಹಿಸಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದ್ದಾರೆ.

ಶಹಾಪುರ ನಗರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ, ಕೇಂದ್ರ ಕಾರ್ಮಿಕ ಸಂಘಟನೆ ಸಿಐಟಿಯು ಸಂಘಟನೆಗಳ ಜಂಟಿಯಲ್ಲಿ ಜಿಲ್ಲಾ ಮುಖಂಡರ ಸಭೆ ಜರುಗಿತು. ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ, 16 ರಂದು ಜಿಲ್ಲೆಯ 4 ತಾಲೂಕು ಕೇಂದ್ರಗಳಲ್ಲಿ ಮುಷ್ಕರ ಮಾಡಲು ತಿರ್ಮಾನಿಸಲಾಯಿತು. ನಂತರ ಮುಷ್ಕರದ ಹಿನ್ನಲೇ ಕರಪತ್ರ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಚೆನ್ನಪ್ಪ ಆನೆಗುಂದಿ, ದಾವಲ್‌ಸಾಬ್ ನದಾಫ್, ಎಸ್.ಎಂ ಸಾಗರ್, ರಂಗಮ್ಮ ಕಟ್ಟಿಮನಿ, ಅನಿತಾ ಹಿರೇಮಠ, ಧರ್ಮಣ್ಣ ದೊರೆ, ಬಸಲಿಂಗಮ್ಮ ನಾಟೇಕರ್, ಇಂದಿರಾದೇವಿ, ಯಮನಮ್ಮ, ಭೀಮರಾಯ ಟಪ್ಪೇದಾರ್, ಭೀಮರಾಯ ಪೂಜಾರಿ, ಸೇರಿದಂತೆ ಇತರರು ಇದ್ದರು.

ವಾಹನ ಪಲ್ಟಿ: ಮಹಿಳೆ ಸಾವು



ಹುಣಸಗಿ ತಾಲೂಕಿನ ಸದಬ ಗ್ರಾಮದ ಹತ್ತಿರ ಕೂಲಿ ಕಾರ್ಮಿಕರನ್ನು ಕರೆದು ಕೊಂಡು ತೆರಳುತ್ತಿರುವ ವಾಹನ ಪಲ್ಟಿ.

ಆರೋಗ್ಯ ಕೇಂದ್ರಕ್ಕೆ ಯುವ ಮುಖಂಡ ಬಬ್ಲುಗೌಡ ಆರೋಗ್ಯ ಕೇಂದ್ರಕ್ಕೆ ಭೇಟಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.

ಹುಣಸಗಿ: ಕೂಲಿ ಕೆಲಸಕ್ಕೆಂದು 40 ಕ್ಕೂ ಹೆಚ್ಚು ಮಹಿಳೆಯರನ್ನು ಕರೆದುಕೊಂಡು ಹೊರಟ್ಟಿದ್ದ ಬೊಲೆರೋ ಪಿಕ್ ಆಫ್ ವಾಹನ ಪಲ್ಟಿಯಾಗಿ ಒಬ್ಬ ಮಹಿಳೆ ಸ್ಥಳದಲ್ಲಿಯೇ ಸಾವನ್ನಪ್ಪಿದರೆ ಹಲವರಿಗೆ ಗಂಭೀರ ಗಾಯವಾದ ಘಟನೆ ಜಿಲ್ಲೆಯ ಕೆಂಭಾವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಜರುಗಿದೆ.

ಲಕ್ಷ್ಮೀಬಾಯಿ (35) ಮೃತ ದುರ್ದೈವಿ ಯಾಗಿದ್ದು, 34ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಇದರಲ್ಲಿ ಮೂವರು ಮಹಿಳೆ ಕೂಲಿ ಕಾರ್ಮಿಕರಿಗೆ ಸ್ಥಿತಿ ಚಿಂತಾಜನಕವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ನೆರೆಯ ವಿಜಯಪುರ ಜಿಲ್ಲೆಗೆ ರವಾನಿಸಲಾಗಿದೆ. ಗಾಯಾಳುಗಳೆಲ್ಲರೂ ಕಲ್ಲದೇವನಹಳ್ಳಿ ಗ್ರಾಮದವರಾಗಿದ್ದಾರೆ.

ಘಟನೆ ವಿವರ: ತಾಲೂಕಿನ ಕಲ್ಲದೇವನಹಳ್ಳಿ ಗ್ರಾಮದ 40ಕ್ಕೂ ಹೆಚ್ಚು ಕೂಲಿ ಕಾರ್ಮಿಕರ ಮಹಿಳೆಯರು ಬೊಲೆರೋ ಪಿಕ್ ಆಫ್ ವಾಹನದಲ್ಲಿ ಯಾಳಗಿ ಗ್ರಾಮದ ಹೊಲವೊಂದರಲ್ಲಿ ಕೆಲಸಕ್ಕಾಗಿ ಹೊರಟ್ಟಿದಾಗ ಸದಬ ಸಮೀಪಿಸುತ್ತಿದ್ದಂತೆ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಅವಘಡ ಸಂಭವಿಸಿದೆ.

ಈ ಬಾರಿ ಬರಗಾಲದ ಛಾಯೆ ಆವರಿಸಿರುವದರಿಂದ ದುಡಿಯುವ ಕೈಯಗಳಿಗೆ ಸ್ಥಳೀಯವಾಗಿ ಕೆಲಸ ಕಾರ್ಯಗಳು ಕಡಿಮೆಯಾಗಿದ್ದು, ಬಡ ಕುಟುಂಬಸ್ಥರು ಕೂಲಿ ಕೆಲಸ ಅರಸಿ ಕೊಂಡು ಬೇರೆ ಬೇರೆ ಗ್ರಾಮಗಳಿಗೆ ತೆರಳುವುದು ಈ ಭಾಗದಲ್ಲಿ ಸರ್ವ ಸಾಮಾನ್ಯ ವಾಗಿದೆ.

ಆದರೆ, ಓವರ್ ಲೋಡ್, ಅವಕಾಶಕ್ಕಿಂತ ಹೆಚ್ಚು ಜನರು ತುಂಬಿಕೊಂಡು ಹೋದರು ಸಹ ಆರ್ ಟಿಒ ಮತ್ತು ಪೊಲೀಸ್ ಇಲಾಖೆಗಳು ನಮಗೂ ಇದಕ್ಕೂ ಸಂಬಂಧವಿಲ್ಲಂತೆ ವರ್ತಿಸುತ್ತಿರುವುದೆ ಇತಂಹ ದುರ್ಘಟನೆಗಳಿಗೆ ಕಾರಣವಾಗಿದೆ ಎನ್ನುವ ದೂರುಗಳು ಸಾರ್ವಜನಿಕ ವಲಯದಲ್ಲಿ ಪ್ರಕರಣದ ನಂತರ ವ್ಯಕ್ತವಾಗಿವೆ.

> ಕಳೆದ ಒಂದು ತಿಂಗಳಿನಿಂದ ವಲಯದಲ್ಲಿ ಕಾರ್ಮಿಕರ ಬೇಡಿಕೆ ಅತೀ ಹೆಚ್ಚಾಗಿದ್ದು ಹಣದಾಸೆಗೆ ವಾಹನಗಳ ಚಾಲಕರು ವಾಹನಗಳಲ್ಲಿ ಮಿತಿ ಮೀರಿ ಕಾರ್ಮಿಕರನ್ನು ತುಂಬಿ ಹಲವು ಗ್ರಾಮಾಂತರ ಪ್ರದೇಶಗಳಲ್ಲಿ ಕರೆದುಕೊಂಡು ಹೋಗುವುದು ಸಾಮಾನ್ಯವಾಗಿದ್ದು, ಇದನ್ನು ಕಂಡರು ಕೂಡಾ ಕಾಣದಂತೆ ಸಂಬಂಧಪಟ್ಟ ಇಲಾಖೆಗಳು ವರ್ತಿಸುತ್ತಿವೆ.
>
> -ಸಾಯಿಬಣ್ಣ ಎಂಟಮಾನ್, ದಲಿತ ಮುಖಂಡ

ಆರ್ ಕೆ ಎನ್, ಬಬ್ಲುಗೌಡ ಭೇಟಿ

ಘಟನೆ ಸುದ್ದಿ ತಿಳಿಯುತ್ತಲೆ ಬಿಜೆಪಿ ಯುವ ಮುಖಂಡ ಬಬ್ಲುಗೌಡ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಾಜಾ ಕುಮಾರ ನಾಯಕ ಅವರುಗಳು ಹುಣಸಗಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿ ಧೈರ್ಯ ತುಂಬಿ ದ್ದಾರೆ. ಈ ಕುರಿತು ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವ ಉತ್ಸವ ಆಚರಿಸಲು ಆಗ್ರಹ

ಸಾಂಸ್ಕೃತಿಕ ನಾಯಕನ ಘೋಷಣೆ | 15 ಕೋಟಿಗೂ ಅಧಿಕ ಹಣ ಮೀಸಲು

ಬಸವಕಲ್ಯಾಣ: ನಾಡಿನ ಪರಂಪರೆ ಮತ್ತು ಇತಿಹಾಸ ಜನಸಾಮಾನ್ಯರಿಗೆ ಮುಟ್ಟಿಸಲು ಕರ್ನಾಟಕ ಸರಕಾರ ಅನೇಕ ಉತ್ಸವಗಳನ್ನು ಮಾಡುತ್ತ ಬಂದಿದೆ. ಅದರಂತೆ ಬಸವ ಉತ್ಸವವು 2009-10ನೇ ಸಾಲಿನಿಂದ ಪ್ರಾರಂಭಿಸಿದೆ. ಆದರೆ ಪ್ರತಿವರ್ಷ ಬಸವ ಉತ್ಸವ ಆಚರಿಸುತ್ತಿಲ್ಲ ಎಂದು ಸರಕಾರದ ನಡೆಯನ್ನು ಬಸವಪರ ಸಂಘಟನೆಗಳ ಮುಖಂಡರು ಖಂಡಿಸಿದರು.

ಬಸವಲ್ಯಾಣದ ಬಸವೇಶ್ವರ ಹಿರಿಯ ನಾಗರಿಕರ ಒಕ್ಕೂಟದ ಅಧ್ಯಕ್ಷ ಪ್ರೊ.ಸಿ.ಬಿ ಪ್ರತಾಪೂರೆ ಅವರು ಮಾತನಾಡಿ, ಸರಕಾರ ಒಂದು ಕಡೆ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸಿದ್ದಾರೆ. ಇನ್ನೊಂದು ಕಡೆ ಬಸವ ಉತ್ಸವ ಆಚರಿಸಲು ನಿಷ್ಕಾಳಜಿವಹಿಸುತ್ತಿರುವುದು ಖಂಡನೀಯವಾಗಿದೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಪ್ರೊ. ಎಸ್.ಜೆ ಕರಣೆ ಮಾತನಾಡಿ ಸರಕಾರ ಮೈಸೂರು ಉತ್ಸವ, ಹಂಪಿ ಉತ್ಸವ ಪ್ರತಿ ವರ್ಷ ಆಚರಿಸುತ್ತದೆ. ಅದರಂತೆ ಬಸವ ಉತ್ಸವವು ಸಹ ಪ್ರತಿ ವರ್ಷ ಆಚರಿಸಬೇಕು. ಈ ವರ್ಷ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕನೆಂದು ಘೋಷಿಸಿದಕ್ಕೆ ಸರಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಆದರೆ ಬಸವ ಉತ್ಸವವನ್ನು ವಿಶ್ವ ಮಟ್ಟದ ಉತ್ಸವವಾಗಿ ಬಸವಕಲ್ಯಾಣದಲ್ಲಿ ಪ್ರತಿ ವರ್ಷ ಆಚರಿಸುವಂತೆ ಸರಕಾರ ಮುಂಬರುವ ಬಜೆಟನಲ್ಲಿ ಘೋಷಿಸಿ, ಅದಕ್ಕೆ 15 ಕೋಟಿಗೂ ಅಧಿಕ ಹಣವನ್ನು ಮೀಸಲಿಡುವ ಮುಖಾಂತರ ಬಸವ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಆಗ್ರಹಿಸಿದರು. ಪ್ರಮುಖರಾದ ಜಗನ್ನಾಥ ಪತಂಗೆ, ಪ್ರೊ.ಎ.ಡಿ ಪಾಟೀಲ, ಶಾಮರಾವ ಸಿಂಗ್, ಶ್ರೀಶೈಲ ಹುಡೆದ, ಬಾಬುರಾವ ಗೌಡಗಾಂವೆ, ಮಹಾದೇವಪ್ಪ ಇಜಾರೆ, ಗಣಪತಿ ಕಾಸ್ತೆ, ಜೈಪ್ರಕಾಶ ಸದಾನಂದೆ, ಬಸವಣಪ್ಪ ನೆಳಗಿ, ಸತ್ಯಕ್ಕ ತಾಯಿ ಸೇರರಿದಂತೆ ಇತರರಿದ್ದರು.

ಗ್ರಾಪಂ ನಲ್ಲಿ ಸಂವಿಧಾನ ಜಾಗ್ರತಿ ಜಾಥಾ

ಅನೇಕ ಮಹಾಪುರುಷರ ವೇಷದಲ್ಲಿ ಗಮನ ಸೆಳೆದ ಮಕ್ಕಳು

ಬೀದರ್: ತಾಲೂಕಿನಲ್ಲಿ ಬರುವ ಯದಲಾಪೂರ ಗ್ರಾಮ ಪಂಚಾಯಯಿ ನಲ್ಲಿ ಸಂವಿಧಾನ ಜಾಗ್ರತಿ ಜಾಥಾ ಜರುಗಿತು. ಮಹಾಪುರುಷರ ವೇಷದಲ್ಲಿ ಶಾಲೆಯ ಮಕ್ಕಳು ಬುದ್ಧ, ಬಸವ, ಅಂಬೇಡ್ಕರ್, ಸೇರಿದಂತೆ ಅಕ್ಕಮಹಾದೇವಿ ಹಾಗೂ ನಿಲಾಂಬಿಕಾ, ಸೇರಿದಂತೆ ಅನೇಕ ಮಹಾಪುರುಷರ ವೇಷ ಧರಿಸಿದ ಮಕ್ಕಳು ನೋಡುಗರ ಗಮನ ಸೆಳೆದರು. ಗ್ರಾಪಂ. ಅಧ್ಯಕ್ಷರು ಹಾಗೂ ಉಪಾಧ್ಯಕರು ಸೇರಿದಂತೆ ಸದಸ್ಯರು. ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಂದ ಅದ್ದೂರಿ ಸ್ವಾಗತ ಮಾಡುವ ಮೂಲಕ ಜಾಗ್ರತಿ ಜಾಥಾ ಕೈಗೊಳ್ಳಲಾಯಿತು.

ಸಂವಿಧಾನ ಪೀಠಿಕೆ ಓದುವ ಮೂಲಕ ಚಾಲನೆ ನೀಡಲಾಯಿತು. ಜಾಥಾವು ಯದಲಾಪೂರ ಗ್ರಾಪಂ ನಿಂದ ನಾಗೋರ, ಮನ್ನಳ್ಳಿ, ಮೂಲಕ ಹೊರಡಿತು. ಸಂವಿಧಾನ ಜಾಗೃತಿ ಜಿಲ್ಲಾ ನೋಡಲ್ ಅಧಿಕಾರಿಗಳು, ಡಾ.ಗೌತಮ್ ಅರಳಿ ಮತ್ತು ಸಿಬ್ಬಂದಿಗಳು, ವಿವಿಧ ಸಂಘಟನೆ ಮುಖಂಡರು, ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಹಾಗೂ ವಸತಿ ನಿಲಯದ/ಶಾಲೆಯ ಮಕ್ಕಳು ಮೋರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು, ಶಾಲೆಯ ಮುಖ್ಯಗುರುಗಳು ಭಾಗವಹಿಸಿದರು.

ವಿವಿಧ ಸಂಸ್ಕೃತಿಕ ಕಾರ್ಯಕ್ರಮದ ಮೂಲಕ ಸಂವಿಧಾನ ಜಾಗೃತಿ ಮೂಡಿಸಲಾಯಿತು ಎಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಬೀದರ ರವರು ತಿಳಿಸಿದರು.

ವಿದ್ಯಾರ್ಥಿಗಳಿಗೆ ಕಾನೂನು ಜ್ಞಾನ ಅಗತ್ಯ: ನ್ಯಾ. ಸಿದ್ದರಾಮ

ಶಹಾಪುರ: ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ಕಾನೂನು ಜ್ಞಾನ ನೀಡಬೇಕಾಗಿದೆ. ವಿದ್ಯಾರ್ಥಿಗಳು ಸಹ ಸಂಚಾರಿ ನಿಯಮಗಳನ್ನು ಪಾಲಿಸಬೇಕು. ಯಾವುದೇ ಕಾರಣಕ್ಕೂ 18 ವರ್ಷದ ಒಳಗೆ ವಾಹನ ಚಲಾಯಿಸುವುದು ಅಪರಾಧವಾಗಿದೆ. ಪ್ರತಿಯೊಬ್ಬರು ವಾಹನ ಚಾಲನಾ ಪರವಾನಿಗೆ ಪತ್ರ ಪಡೆದುಕೊಳ್ಳಬೇಕು ಹಾಗೂ ವಾಹನಕ್ಕೆ ವಿಮಾ ನೋಂದಣಿ ಕಡ್ಡಾಯವಾಗಿರಲಿ ಎಂದು ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರು ಹಾಗೂ ನ್ಯಾಯಾಧೀಶ ಸಿದ್ದರಾಮ ಟಿ.ಪಿ ಹೇಳಿದರು.

ಸಮೀಪದ ಕುರಕುಂದಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಲ್ಲದೆ ವಿದ್ಯಾರ್ಥಿಗಳು ಸಮಾಜದ ಅನಿಷ್ಠ ಪದ್ಧತಿಯ ಬಗ್ಗೆ ಜಾಗೃತಿ ಹಾಗೂ ಅರಿವು ಮೂಡಿಸಬೇಕು. ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ದತಿ, ಜೀತ ಪದ್ಧತಿ ಇವೆಲ್ಲವು ಕಾನೂನಿನಲ್ಲಿ ಅಪರಾಧವಾಗಿದೆ. ಗ್ರಾಮೀಣ ಪ್ರದೇಶದ ಜನತೆಗೂ ಇದರ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಶಹಾಪುರ ಪ್ರದಾನ ನ್ಯಾಯಾಧೀಶ ಶೋಭಾ, ವಕೀಲರ ಸಂಘದ ಉಪಾಧ್ಯಕ್ಷ ಶರಣಪ್ಪ ಪ್ಯಾಟಿ ಶಿರವಾಳ, ಮೈಲಾರಪ್ಪ ಬೊಮ್ಮನಹಳ್ಳಿ, ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

ಅಧ್ಯಕ್ಷ ಅಬ್ದುಲ್ ಖದೀರ್‌ಗೆ ಸಿಲ್ವರ್ ಎಲಿಫೆಂಟ್ ಪ್ರಶಸ್ತಿ

ಬೀದರ್: ನಗರದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರಿಗೆ ಭಾರತ ಸೌಟ್ಸ್ ಮತ್ತು ಗೈಡ್ಸ್ ಸಿಲ್ವರ್ ಎಲಿಫೆಂಟ್ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಸೌಟ್ಸ್ ಮತ್ತು ಗೈಡ್ಸ್ ಚಳವಳಿಗೆ ನೀಡಿದ ಅನುಪಮ ಕೊಡುಗೆಗಾಗಿ ಅಬ್ದುಲ್ ಖದೀರ್ ಅವರನ್ನು 2023-24ನೇ ಸಾಲಿನ ಸೌಟ್ಸ್ ಗೈಡ್ಸ್ ನ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಭಾರತ ಸೌಟ್ಸ್ ಗೈಡ್ಸ್‌ನ ರಾಷ್ಟ್ರೀಯ ಹೆಚ್ಚುವರಿ ಮುಖ್ಯ ಆಯುಕ್ತ ಎಂ.ಎ. ಖಾಲೀದ್ ತಿಳಿಸಿದ್ದಾರೆ.

ರಾಷ್ಟ್ರಪತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ತಮ್ಮನ್ನು ಸೌಟ್ಸ್ ಮತ್ತು ಗೈಡ್ಸ್ ಸಿಲ್ವರ್ ಎಲಿಫೆಂಟ್ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ಉಂಟು ಮಾಡಿದೆ ಡಾ. ಅಬ್ದುಲ್ ಖದೀರ್ ಪ್ರತಿಕ್ರಿಯಿಸಿದ್ದಾರೆ.

ಭಾರತ ಸೌಟ್ಸ್ ಮತ್ತು ಗೈಡ್ಸ್ ಯುವಜನರ ಅತಿದೊಡ್ಡ ಸಂಸ್ಥೆಯಾಗಿದೆ. ವಿಶ್ವದ 225 ದೇಶಗಳಲ್ಲಿ ತನ್ನ ಕಾರ್ಯ ಚಟುವಟಿ ಕೆಗಳನ್ನು ವಿಸ್ತರಿಸಿ ಕೊಂಡಿದೆ. ಇನ್ನಷ್ಟು ಉತ್ಸಾಹದಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದೆ ಎಂದು ತಿಳಿಸಿದ್ದಾರೆ.

ಸೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಅಬ್ದುಲ್ ಖದೀರ್ ಅವರು ಸಂಸ್ಥೆಯ ಜಿಲ್ಲಾ ಘಟಕದ ಉಪಾಧ್ಯಕ್ಷರೂ ಆಗಿದ್ದಾರೆ. ಶಿಕ್ಷಣ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ಸಕ್ರಿಯರಾ ಗಿರುವ ಅಬ್ದುಲ್ ಖದೀರ್ ಅವರು ಸಂಸ್ಥೆಯ ಜಿಲ್ಲಾ ಘಟಕದ ಉಪಾಧ್ಯಕ್ಷರೂ ಆಗಿದ್ದಾರೆ. ಶಿಕ್ಷಣ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ಕರ್ನಾಟಕ ರಾಜ್ಯೋತ್ಸವ ಸೇರಿದಂತೆ ಅನೇಕ ಪ್ರಶಸ್ತಿ, ಸಮ್ಮಾನಗಳು ಸಂದಿವೆ.

ಮೈನವಿರೇಳಿಸಿದ ಸಾಹಸ ಚಟುವಟಿಕೆ

ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೋರೇಟ್‌ನ ಇಲ್ಲಿನ ಶಹಾಪುರ ಗೇಟ್ ಸಮೀಪದ ಶಾಹೀನ್ ಪದವಿ ಪೂರ್ವ ವಿಜ್ಞಾನ ಕಾಲೇಜು ಆವರಣದಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆದವು.

ಬೀದರ್: ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೊರೇಟ್‌ನ ಇಲ್ಲಿನ ಶಹಾಪುರ ಗೇಟ್ ಸಮೀಪದ ಶಾಹೀನ್ ಪದವಿ ಪೂರ್ವ ವಿಜ್ಞಾನ ಕಾಲೇಜು ಆವರಣದಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆದವು.

ಸೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಪ್ರೇಕ್ಷಣೀಯ ಸ್ಥಳಗಳ ಭೇಟಿ, ಸಾಹಸಮಯ ಚಟುವಟಿಕೆ, ಸ್ಪರ್ಧೆ, ಸಂವಾದ ಮೊದಲಾದ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ತಲಾ ಒಂದು ಸಾವಿರ ವಿದ್ಯಾರ್ಥಿಗಳ ಮೂರು ತಂಡಗಳ ಪೈಕಿ ಒಂದು ತಂಡ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದರೆ, ಇನ್ನೊಂದು ತಂಡ ಸಾಹಸ ಚಟುವಟಿಕೆಗಳ ಮಜಾ ಅನುಭವಿಸಿತು. ಮತ್ತೊಂದು ತಂಡ ಸ್ಪರ್ಧೆಗಳಲ್ಲಿ ಪ್ರತಿಭೆ ಪ್ರದರ್ಶಿಸಿತು. ವಿದ್ಯಾರ್ಥಿಗಳು 30 ಬಸ್‌ಗಳಲ್ಲಿನಗರದ ಐತಿಹಾಸಿಕ ಕೋಟೆ, ಗುರುದ್ವಾರ, ಅಷ್ಟೂರಿನ ಗೊಮ್ಮಟಗಳಿಗೆ ಭೇಟಿ ನೀಡಿದರು.

ಬೀದರ್‌ನ ಶಹಾಪುರ ಗೇಟ್ ಬಳಿಯ ಶಾಹೀನ್ ಪದವಿ ಪೂರ್ವ ವಿಜ್ಞಾನ ಕಾಲೇಜು ಆವರಣದಲ್ಲಿ ನಡೆಯುತ್ತಿರುವ ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೊರೇಟ್ ಎರಡನೇ ದಿನವಾದ ಶುಕ್ರವಾರ ಸೈಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಸಾಹಸ ಪ್ರದರ್ಶನಗಳು ಗಮನ ಸೆಳೆದವು.

ಸೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಹೆಚ್ಚುವರಿ ಮುಖ್ಯ ಆಯುಕ್ತ ಎಂ.ಎ. ಖಾಲೀದ್, ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಪ್ರೇಕ್ಷಣೀಯ ಸ್ಥಳಗಳ ಬಸ್ ಸಂಚಾರಕ್ಕೆ ಚಾಲನೆ ನೀಡಿದರು. ಜಾಂಬೊರೇಟ್ ಮುಖ್ಯಸ್ಥ ಡಾ. ಅಬ್ದುಲ್ ಖದೀರ್, ಹೆಚ್ಚುವರಿ ಮುಖ್ಯಸ್ಥೆ ಗುರಮ್ಮ ಸಿದ್ದಾರೆಡ್ಡಿ, ಸಂಯೋಜಕಿ ಮಲ್ಲೇಶ್ವರಿ ಜುಜಾರೆ, ಕಾರ್ಯದರ್ಶಿ ಎಚ್.ಬಿ. ಭರಶೆಟ್ಟಿ, ಖಜಾಂಚಿ ತೌಸಿಫ್ ಇದ್ದರು.

> ಶಾಹೀನ್ ಕಾಲೇಜು ಪರಿಸರದಲ್ಲಿ ರಂಗೋಲಿ, ಮೆಹಂದಿ, ತರಕಾರಿ ಮಾದರಿ, ಪೇಪರ್ ಕಟ್ಟಿಂಗ್, ಬೆಂಕಿ ಇಲ್ಲದೆ ಅಡುಗೆ ತಯಾರಿಕೆ, ಪಯೋ ನಿರಿಂಗ್ ಮಾದರಿ, ಮಣ್ಣಿನ ಮಾದರಿ, ರಸಪ್ರಶ್ನೆ ಸ್ಪರ್ಧೆಗಳು ನಡೆದವು. ದೈಹಿಕ ಶಿಕ್ಷಣದ ಪ್ರದರ್ಶನ, ಸಾಂಸ್ಕೃತಿಕ ನೃತ್ಯಗಳು ಗಮನ ಸೆಳೆದವು. ಸಾಹಸಮಯ ಚಟುವಟಿಕೆಗಳು ಮೈ ನವಿರೇಳಿಸಿದವು. ಉಯ್ಯಾಲೆ ನಡಿಗೆ, ನಿಯಂತ್ರಣ ನಡಿಗೆ, ಮಂಕಿ ಬ್ರಿಡ್ಜ್, ಕಮಾಂಡೊ ಬ್ರಿಡ್ಜ್ ಟೈರ್ ಗೋಡೆ, ಮಂಕಿ ಕ್ರಾವಲಿಂಗ್, ವೀಕ್ಷಣಾ ಗೋಪುರ ಮೊದಲಾದವು ಸಾಹಸ ಚಟುವಟಿಕೆಗಳಲ್ಲಿ ಸೇರಿದವು.

ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
CIN: U67100TZ2014PTC020363
ಕಾರ್ಪೊರೇಟ್ ಕಛೇರಿ: ಕೊಹಿನೂರ್ ಸ್ಕ್ವೇರ್, 47ನೇ ಮಹಡಿ, ಎನ್ ಸಿಕೇಲ್ಕರ್ ಮಾರ್ಗ್ ಆರ್ ಜಿ ಗಡ್ಕರಿ ಚೌಕ, ದಾದರ್ (ಪಶ್ಚಿಮ), ಮುಂಬಯಿ-400028
ಇ-ಮೇಲ್: karthi.govindasamy@omkaraarc.com ಅಧಿಕೃತ ಅಧಿಕಾರಿ ಮೊ. ಸಂ. +91 - 93446 84194/98840 62068

[ಅಪೆಂಡಿಕ್ಸ್ - IV-ಎ] [ನಿಯಮ 8(6) ರ ಪ್ರೊವಿಜೊವನ್ನು ನೋಡಿ ಆರ್/ಡಬ್ಲ್ಯು 9(1)

ಸ್ಥಿರಾಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ಸಾರ್ವಜನಿಕ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002ನ್ನು ("ಸರ್ಫೇಸಿ ಕಾಯಿದೆ") ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ, 2002ರನ್ವಯ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಪ್ರಕಟಣೆ

ಸಾರ್ವಜನಿಕರಿಗೆ ಸಾಲಗಾರರಿಗೆ, ಅಡಮಾನದಾರರಿಗೆ ಮತ್ತು ಜಾಮೀನುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಪೂರಕ ಭದ್ರತಾದಾರರಾದ ಫುಲ್ಲರ್ಟನ್ ಇಂಡಿಯ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಎಫ್‌ಐಹೆಚ್‌ಎಫ್‌ಸಿಎಲ್) ನ ಅಧಿಕೃತ ಅಧಿಕಾರಿಯವರು ಸ್ವಾಧೀನಪಡಿಸಿಕೊಂಡಿದ್ದು, ಅದನ್ನು ಈಗ ಇ-ಹರಾಜು ಮೂಲಕ ಮಾರಾಟ ಮಾಡಲು ನಿರ್ಧರಿಸಿರುತ್ತಾರೆ. ಮುಂದುವರಿದು, ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈ.ಲಿ., (ಓಎಆರ್‌ಪಿಎಲ್) (ಓಂಕಾರ ಎಆರ್‌ಸಿ ಆಕ್ಟಿಂಗ್ ಇನ್ ಕೆಪಾಸಿಟಿ ಆಫ್ ಓಂಕಾರ ಪಿಎಸ್22/2020-21 ಟ್ರಸ್ಟ್) ನಿಂದ ಸಾಲಗಾರರ/ ಜಾಮೀನುದಾರರ/ ಅಡಮಾನದಾರರ ಅಸೈನ್‌ಮೆಂಟ್ ಒಪ್ಪಂದ ದಿನಾಂಕ 26.02.2021 ರಂದು ಸಂಪೂರ್ಣ ಹೊಣೆಗಾರಿಕೆ ಮತ್ತು ಬಾಧ್ಯತೆಗಳನ್ನು ಸ್ವಾಧಿನಪಡಿಸಿಕೊಂಡಿದ್ದು, ಜೊತೆಗೆ ಫುಲ್ಲರ್ಟನ್ ಇಂಡಿಯ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಎಫ್‌ಐಹೆಚ್‌ಎಫ್‌ಸಿಎಲ್) ಅಂದರೆ (ಅಸೈನರ್ ಬ್ಯಾಂಕ್) ರವರಿಂದ ಭದ್ರತೆಯನ್ನು ಪಡೆದುಕೊಂಡಿದೆ. ಅದರಂತೆ, ಓಎಆರ್‌ಪಿಎಲ್ ಅಸೈನರ್ ಮತ್ತು ಎಂಪವರ್‌ನ್ನು ಬಾಕಿ ವಸೂಲಿಗಾಗಿ ಬಳಸಿಕೊಳ್ಳಲಿದೆ.
ಅದುದರಿಂದ ಅಧಿಕೃತ ಅಧಿಕಾರಿಗಳು ಓಎಆರ್‌ಪಿಎಲ್ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಬಾಕಿ ವಸೂಲಾತಿಗಾಗಿ ಈ ಕೆಳಗೆ ಹೆಸರಿಸಿರುವ ಭದ್ರತಾ ಆಸ್ತಿಗಳನ್ನು ಅಸ್ಸೈನರ್‌ರವರಿಂದ ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದೆ. ಓಎಆರ್‌ಪಿಎಲ್‌ನ ಅಧಿಕೃತ ಅಧಿಕಾರಿಯವರು ಬಾಕಿ ವಸೂಲಿಗಾಗಿ ಈ ಕೆಳಗೆ ಹೆಸರಿಸಿರುವ ಮಾರಾಟ ಮಾಡಲು ನಿರ್ಧರಿಸಿದ್ದಾರೆ. ಆಸ್ತಿಗಳನ್ನು ಸೆಕ್ಷನ್ 13(2) ಮತ್ತು (4) ರ ಸರ್ಫೇಸಿ ಕಾಯಿದೆ ಅನ್ವಯ "ಎಲ್ಲಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಹೇಗಿದೆಯೋ ಹಾಗೆ" ಯಾವ ಅವಲಂಬನೆ ಇಲ್ಲದೆ ಆಯಾ ಅಂಕಣದಲ್ಲಿ ಹೆಸರಿಸಿರುವ ಮೊತ್ತದಂತೆ ಪೂರಕ ಭದ್ರತಾದಾರರಾದ ಓಎಆರ್‌ಪಿಎಲ್ ಇವರಿಗೆ ಸಾಲಗಾರರು ಮತ್ತು ಸಹಸಾಲಗಾರರಿಂದ ಬರಬೇಕಾದ ಬಾಕಿ ಮೊತ್ತಕ್ಕಾಗಿ ಮಾರಾಟ ಮಾಡಲಿರುವರು. ಸಾಲಗಾರರು/ಜಾಮೀನುದಾರರು/ಅಡಮಾನದಾರರು, ಭದ್ರತೆಗಳು, ಮಾಲೀಕರು, ಬರಬೇಕಾದ ಬಾಕಿ, ಡಿಮ್ಯಾಂಡ್ ನೋಟಿಸ್ ಕಳುಹಿಸಿದ ದಿನಾಂಕ, ಮೀಸಲು ಬೆಲೆ, ಬಿಡ್ ಹೆಚ್ಚಳದ ಮೊತ್ತ, ಅರ್ನೆಸ್ಟ್ ಠೇವಣಿ ಹಣ (ಇಎಂಡಿ), ಪರಿವೀಕ್ಷಣೆ ದಿನಾಂಕ ಮತ್ತು ಸಮಯವನ್ನು ಈ ಕೆಳಗೆ ನಮೂದಿಸಲಾಗಿದೆ.

ಲಾಟ್ ಸಂ.	ಸಾಲಗಾರರು/ಜಾಮೀನುದಾರರು ಅಡಮಾನದಾರರು/ ಸರ್ಫೇಸಿ ಕಾಯಿದೆ 13(2) ರ ಅಡಿ ತಗಾದೆ ಸೂಚನೆ ದಿನಾಂಕ/ಭೌತಿಕ ಸ್ವಾಧೀನತೆ ದಿನಾಂಕ	ಆಸ್ತಿಯ ಮಾಲೀಕರು	ಆಸ್ತಿಯ ವಿವರ	ಆಸ್ತಿಯ ಸ್ವರೂಪ	10.02.2024 ರವರೆಗೆ ಬರಬೇಕಾದ ಬಾಕಿ	ಮೀಸಲು ಬೆಲೆ	ಇಎಂಡಿ ಮೀಸಲು ಬೆಲೆಯ 10%	ಪರಿವೀಕ್ಷಣೆ ದಿನಾಂಕ ಮತ್ತು ಸಮಯ
ಲಾಟ್ 1	ಶ್ರೀ ನಾರಾಯಣರಾವ್ ಬಿನ್ ಭೀಮರಾವ್ ಮತ್ತು ಶ್ರೀ ಕಿರಣ್ ಬಿನ್ ನಾರಾಯಣರಾವ್ ದಿನಾಂಕ 16.09.2021, ರೂ.7,47,868.37 01.01.2021ರಂತೆ ಭೌತಿಕ ಸ್ವಾಧೀನತೆ ದಿನಾಂಕ : 12.12.2023	ಶ್ರೀ ನಾರಾಯಣ ರಾವ್ ಬಿನ್ ಭೀಮರಾವ್	ಮನೆ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಮುನ್ಸಿಪಲ್ ನಂ. 5-1-86 (ಹಳೆ) 5-1-87 (ಹೊಸ) ಒಟ್ಟು ವಿಸ್ತೀರ್ಣ 855.24 ಚದರಡಿ ಮತ್ತು ಮೊದಲ ಮಹಡಿಯ ಪ್ಲಿಂತ್ ಏರಿಯಾ 855.24 ಚ.ಅಡಿ ಮತ್ತು ಮೊದಲ ಮಹಡಿಯ ಪ್ಲಿಂತ್ ಏರಿಯಾ 492.06 ಚ.ಅಡಿ ನೇತಾಜಿ ನಗರ (ಸೋಮವಾರಪೇಟೆ) ರಾಯಚೂರು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಾಘವೇಂದ್ರ ರಾವ್‌ರವರ ಮನೆ, ಪಶ್ಚಿಮಕ್ಕೆ: ರಾಘವೇಂದ್ರ ಎ ರವರ ಮನೆ, ಉತ್ತರಕ್ಕೆ; ಹಾದಿ, ದಕ್ಷಿಣಕ್ಕೆ: ಈರಮ್ಮ ರವರ ಮನೆ. ಮತ್ತು ಹೆಚ್ಚಿನ ನಿರ್ದಿಷ್ಟ ವಿವರಗಳನ್ನು ಮನೆಯ ನಕ್ಷೆಯಲ್ಲಿ ಕೆಂಪು ಬಣ್ಣದಲ್ಲಿ ಗುರುತು ಹಾಕಿ ಕ್ರಯಪತ್ರ ಸಂ. 7034/2012-2013 ಕ್ಕೆ ಅಂಟಿಸಲಾಗಿದೆ. ದಿನಾಂಕ 25.08.2012 ಎಸ್‌ಆರ್‌ಒ ರಾಯಚೂರು	ವಾಸಯೋಗ್ಯ ಭೂಮಿ ಮತ್ತು ಕಟ್ಟಡ	ರೂ.12,60,780/- (ಹನ್ನೆರಡು ಲಕ್ಷ ಅರುವತ್ತು ಸಾವಿರದ ಏಳುನೂರ ಎಂಭತ್ತು ರೂಪಾಯಿ ಮಾತ್ರ)	ರೂ.15,00,000/- (ಹದಿನೈದು ಲಕ್ಷ ರೂಪಾಯಿ ಮಾತ್ರ)	ರೂ.1,50,000/- (ಒಂದು ಲಕ್ಷ ಐವತ್ತು ಸಾವಿರ ರೂಪಾಯಿ ಮಾತ್ರ)	05.03.2024 ಸಮಯ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ
ಲಾಟ್ 2	ಶ್ರೀ ಮಿರ್ಜಾ ವಾರೀಸ್ ಆಲಿ ಬೇಗ್ ಬಂದನ್‌ವಾಜಿ ಮತ್ತು ಶ್ರೀಮತಿ ಯಾಸ್ಮೀನ್ ಬೇಗಂ. ದಿನಾಂಕ: 01.02.2022 ರೂ.42,15,489.02 31.12.2021ರಂತೆ ಭೌತಿಕ ಸ್ವಾಧೀನತೆ ದಿನಾಂಕ : 22.11.2023	ಶ್ರೀ ಮಿರ್ಜಾ ವಾರೀಸ್ ಆಲಿ ಬೇಗ್ ಬಂದನ್ ವಾಜ್	ಮನೆ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಮುನ್ಸಿಪಲ್ ನಂ. 9-9-66 (ಹಳೆ) 9-9-70 (ಹೊಸ) ವಿಸ್ತೀರ್ಣ 958 ಚ.ಅಡಿಯು ಮಡ್ಡಿಪೇಟ್, ರಾಯಚೂರು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಜಹೀರುದ್ದೀನ್ ರವರ ಮನೆ, ಪಶ್ಚಿಮಕ್ಕೆ: ಖಾಜಾ ಮೊಯಿದ್ದೀನ್‌ರವರ ಮನೆ, ಉತ್ತರಕ್ಕೆ: ಮುನಾವರ್ ಸಾಬ್ ರ ಮನೆ, ದಕ್ಷಿಣಕ್ಕೆ: ಲೇನ್.	ವಾಸಯೋಗ್ಯ ಭೂಮಿ ಮತ್ತು ಕಟ್ಟಡ	ರೂ.60,49,297/- (ಅರುವತ್ತು ಲಕ್ಷ ನಲವತ್ತೊಂಭತ್ತು ಸಾವಿರದ ಇನ್ನೂರ ತೊಂಭತ್ತೇಳು ರೂಪಾಯಿ ಮಾತ್ರ)	ರೂ.47,50,000/- (ನಲವತ್ತೇಳು ಲಕ್ಷ ಐವತ್ತು ಸಾವಿರ ರೂಪಾಯಿ ಮಾತ್ರ)	ರೂ.4,75,000/- (ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿ ಮಾತ್ರ)	05.03.2024 ಸಮಯ ಮಧ್ಯಾಹ್ನ 03.00 ರಿಂದ ಸಂಜೆ 5.00 ಗಂಟೆ

ಖಾತಾ ಸಂ.: 344905000929 ಬೆನಿಫಿಶಿಯರಿ ಹೆಸರು: ಓಂಕಾರ ಪಿಎಸ್22/2020-21 ಟ್ರಸ್ಟ್) ಬ್ಯಾಂಕ್ ಹೆಸರು: ಐಸಿಐಸಿಐ ಬ್ಯಾಂಕ್, ಶಾಖೆ: ಬಾಂದ್ರಾ (ಪೂ), ಮುಂಬಯಿ, ಐಎಫ್‌ಎಸ್‌ಸಿ ಕೋಡ್ : ಐಸಿಐಸಿ0003449

ಇ-ಹರಾಜು ದಿನಾಂಕ ಮತ್ತು ಸಮಯ	ಲಾಟ್ 1 : 20ನೇ ಮಾರ್ಚ್ 2024 (ಬುಧವಾರ) ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ ಲಾಟ್ 2 : 20ನೇ ಮಾರ್ಚ್ 2024 (ಬುಧವಾರ) ಮಧ್ಯಾಹ್ನ 12.00 ರಿಂದ ಮಧ್ಯಾಹ್ನ 01.00ಗಂಟೆ
ಭಾಗವಹಿಸುವಿಕೆಗಾಗಿ ಬಿಡ್ ಪತ್ರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ / ಕೆವೈಸಿ ದಾಖಲೆ / ಇಎಂಡಿ ದಾಖಲೆ	18ನೇ ಮಾರ್ಚ್ 2024 ರಂದು ಸಂಜೆ 4.00 ಗಂಟೆಯ ಮೊದಲು

ಹರಾಜಿನ ನಿಯಮ ಮತ್ತು ನಿಬಂಧನೆಗಳು: ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಪೂರಕ ಭದ್ರತಾದಾರರ (ಓಎಆರ್‌ಪಿಎಲ್) ರ ವೆಬ್‌ಸೈಟ್ http://omkaraarc.com/auction.php ನಲ್ಲಿ ನೀಡಲಾದ ಲಿಂಕ್‌ನ್ನು ಅಥವಾ ಸೇವಾ ಪೂರೈಕೆದಾರರ ವೆಬ್‌ಸೈಟ್ ಅಂದರೆ https://www.bankeauctions.com ಆಧಾರ ಮಾಡಿಕೊಳ್ಳಿ.

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8(6) ರ ಅಡಿ 9(1)ನ್ನು ಓದಿಕೊಂಡಂತೆ ಮಾರಾಟಕ್ಕೆ ಶಾಸನಬದ್ಧ ಸೂಚನೆ

ಇದು ಸಾಲಗಾರರಿಗೆ ನಿಯಮ 8(6) ರ ಅಡಿ 9(1) ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ಮತ್ತು ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ ಅಡಿ ನೀಡಿದ ಮೇಲಿನ ಸಾಲದ 30ದಿನಗಳ ಕಡ್ಡಾಯ ಸೂಚನೆಯಾಗಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಈ ಮೂಲಕ ಸೂಚಿಸುವುದೇನೆಂದರೆ ಹರಾಜು/ಮಾರಾಟವನ್ನು ಇ-ಹರಾಜು ಮೂಲಕ ಈ ಮೇಲೆ ಹೆಸರಿಸಿದ ದಿನಾಂಕ ಮತ್ತು ಸಮಯದಂದು ನಡೆಸಲಾಗುವುದು ಮತ್ತು ನಿಮಗೆ ಸಲಹೆ ನೀಡುವುದೇನೆಂದರೆ, ಲಭ್ಯವಿರುವ ಸಮಯಾವಕಾಶದಲ್ಲಿ ನೀವು ಇಚ್ಛಿಸಿದಲ್ಲಿ, ಮಾರಾಟ ಅಂತಿಮವಾಗುವ ಮೊದಲು ಬಾಕಿ ಇರುವ ಸಂಪೂರ್ಣ ಮೊತ್ತ ಹಾಗೂ 11.02.2024 ರ ನಂತರದ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಿ ಸ್ವತ್ತುಗಳನ್ನು ಮರಳಿ ಪಡೆದುಕೊಳ್ಳಬಹುದು. ಒಂದು ವೇಳೆ ಪಾವತಿಸಲು ವಿಫಲವಾದಲ್ಲಿ, ಅಧಿಕೃತ ಅಧಿಕಾರಿ / ಪೂರಕ ಭದ್ರತಾದಾರರ ವಿವೇಚನೆಗೆ ಬಿಟ್ಟಂತೆ ನಿಯಮ 8(5)ರ ಅಡಿ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ ನಿಯಮ, 2002ರ ಅಡಿ ವಿಧಿಸಿದಂತೆ ಯಾವುದೇ ರೂಪದಲ್ಲಿ ಮಾರಾಟ ಮಾಡಲಿರುವರು.

(ಕಾರ್ತಿ ಗೋವಿಂದ ಸಾಮಿ) ಮೊಬೈಲ್ ಸಂ. 9344684194
ಅಧಿಕೃತ ಅಧಿಕಾರಿ, ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈ ಲಿ.
ದಿನಾಂಕ: 12.02.2024, ಸ್ಥಳ: ಚೆನ್ನೈ
(ಆಕ್ಟಿಂಗ್ ಇನ್ ಇಟ್ಸ್ ಕೆಪಾಸಿಟಿ ಆಸ್ ಎ ಟ್ರಸ್ಟೀ ಆಫ್ ಓಂಕಾರ ಪಿಎಸ್22/2020-21 ಟ್ರಸ್ಟ್)

ಯಶೋಧಾ ಆರೋಗ್ಯ ವಿಚಾರಿಸಿದ ರಾಜೂಗೌಡ

ವಿಶ್ವವಾಣಿ

ರಕ್ತದ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳು

ಅನುವಂಶೀಯವಾಗಿ ಹರಡುವಿಕೆ

ಸುರಪುರ: ಬೆಂಗಳೂರಿನ ಅಷ್ಟ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಥಲಸ್ಸೇಮಿಯ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ತಾಲೂಕಿನ ವಾಗಣಗೇರಾ ಗ್ರಾಮದ ಯಶೋಧ ಎನ್ನುವ ಬಾಲಕಿಗೆ ಸಹಾಯಹಸ್ತ ಚಾಚಿದ್ದ, ಮಾಜಿ ಸಚಿವ, ಬಿಜೆಪಿ ಉಪಾಧ್ಯಕ್ಷ ನ ರಾಜೂಗೌಡ ಭೇಟಿ ನೀಡಿ ಬಾಲಕಿಯ ಆರೋಗ್ಯ ವಿಚಾರಿಸಿದ್ದಾರೆ.

ವಾಗಣಗೇರಾ ಗ್ರಾಮದ ಮಲ್ಲಿಕಾರ್ಜುನ್ ಎನ್ನುವವರ ಇಬ್ಬರು ಮಕ್ಕಳಾದ ಹರಿಶ್ಚಂದ್ರ ಮತ್ತು ಯಶೋಧಾ ಥಲಸ್ಸೇಮಿಯ ಕಾಯಿಲೆಯಿಂದ ಬಳಲುತ್ತಿರುವ ಕುರಿತು ಕಳೆದ ವರ್ಷ ವಿಶ್ವವಾಣಿ ಪತ್ರಿಕೆಯಲ್ಲಿ ಸುದ್ದಿಯನ್ನು ಪ್ರಕಟಿಸಲಾಗಿತ್ತು.

ಸುದ್ದಿ ತಿಳಿಯುತ್ತಿದ್ದಂತೆ ಅಂದಿನ ಶಾಸಕರಾಗಿದ್ದ ನರಸಿಂಹ ನಾಯಕ (ರಾಜೂಗೌಡ) ಅವರು ಮಕ್ಕಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಅಂದಿನ ಮುಖ್ಯಮಂತ್ರಿಗಳಾಗಿದ್ದ ಬಸವರಾಜ್ ಬೊಮ್ಮಾಯಿಯವರು ಕಲಬುರಗಿಗೆ ಭೇಟಿ ನೀಡಿದಾಗ ವಿಶೇಷ ಕಾಳಜಿಯುನ್ನು ವಹಿಸಿ ಮಕ್ಕಳನ್ನು ಕಲಬುರಗಿ ಕರೆಸಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಭೇಟಿ ಮಾಡಿಸಿ ಮಕ್ಕಳ ಸ್ಥಿತಿಯ ಕುರಿತು ವಿವರಿಸಿ.

ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮಕ್ಕಳ ಚಿಕಿತ್ಸೆಗಾಗಿ ಸರಕಾರದ ವತಿಯಿಂದ ಸಹಾಯಧನ ಕೊಡಿಸಿದ್ದಲ್ಲದೆ, ವೈಯಕ್ತಿಕವಾಗಿ ರಾಜೂಗೌಡ ಮಕ್ಕಳ ಚಿಕಿತ್ಸೆಗಾಗಿ ಧನಸಹಾಯ ನೀಡಿ ಮಾನವೀಯತೆ ಮೆರೆದಿದ್ದರು.

ವಿಶ್ವವಾಣಿ ವರದಿಗೆ ಸ್ಪಂದಿಸಿದ ಶಾಸಕ

ಹಣ ಕೊಟ್ಟು ಅಷ್ಟಕ್ಕೇ ಸುಮ್ಮನಾಗದ ಅವರು ಸದಾ ಬಾಲಕಿಯ ಪೋಷಕರೊಂದಿಗೆ ಸಂಪರ್ಕ ಸಾಧಿಸಿ, ಸದ್ಯ ಯಶೋಧ ಚಿಕಿತ್ಸೆ ಪಡೆಯುತ್ತಿರುವ ಅಷ್ಟ ಸ್ಪೆಷಾಲಿಟಿ ಆಸ್ಪತ್ರೆಗೆ ರಾಜುಗೌಡ ಅವರು ಭೇಟಿ ನೀಡಿ ಮಗುವಿನ ಆರೋಗ್ಯ ವಿಚಾರಿಸಿ ಮಾಹಿತಿಯನ್ನು ಪಡೆದುಕೊಂಡರು.

ಇನ್ನೂ ಬಾಲಕಿಗೆ ಮತ್ತು ಪೋಷಕರಿಗೆ ಧೈರ್ಯವನ್ನು ಹೇಳಿದ್ದಾರೆ.

> ಮರಣಾಂತಿಕ ಥಲಸ್ಸೇಮಿಯ ಕಾಯಿಲೆಯಿಂದ ಬಳಲುತ್ತಿರುವ ಯಶೋಧಳ ಆರೋಗ್ಯ ವಿಚಾರಿಸಿರುವೆ, ಆರೋಗ್ಯದಲ್ಲಿ ಚೇತರಿಕೆ ಯಾಗಿರುವುದು ಬಹಳ ಸಂತಸ ತಂದಿದೆ. ಸಂಪೂರ್ಣವಾಗಿ ಗುಣಮುಖವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.
>
> -ರಾಜೂಗೌಡ, ಬಿಜೆಪಿಯ ರಾಜ್ಯ ಉಪಾಧ್ಯಕ್ಷರು.